Akashvani : Bengaluru
National Bulletin In Kannada
01.09.2025 : 1310hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

01.09.2025 : 1310hrs

*******

**ಮುಖ್ಯಾಂಶಗಳು:**

1. ಭಯೋತ್ಪಾದನೆ ವಿಷಯದಲ್ಲಿ ದ್ವಂದ್ವ ನಿಲುವು ಭಾರತ ಒಪ್ಪುವುದಿಲ್ಲ - ಪ್ರಧಾನಿ ನರೇಂದ್ರ ಮೋದಿ
2. ಎಸ್‌ಸಿಒ ಶೃಂಗಸಭೆ ; ಟಿಯಾಂಜಿನ್ ಘೋಷಣಾ ಪತ್ರ ಬಿಡುಗಡೆ, ಪ್ರಾದೇಶಿಕ ಸಹಕಾರ ಮತ್ತು ನಾವೀನ್ಯತೆಯಲ್ಲಿ ಭಾರತದ ಪಾತ್ರದ ಬಗ್ಗೆ ಶ್ಲಾಘನೆ
3. ಅಫ್ಘಾನಿಸ್ತಾನ ಭೂಕಂಪ ; ಸಾವನ್ನಪ್ಪಿದವರ ಸಂಖ್ಯೆ ೬೨೨ ಕ್ಕೇರಿಕೆ ; ೧ ಸಾವಿರಕ್ಕೂ ಹೆಚ್ಚು ಮಂದಿಗೆ ಗಾಯ
4. ಯುಎಸ್ ಓಪನ್ ಟೆನಿಸ್ ; ಸರ್ಬಿಯಾದ ನೊವಾಕ್ ಜೊಕೊವಿಚ್ ಕ್ವಾರ್ಟರ್ ಫೈನಲ್ ಪ್ರವೇಶ

*******

ಭಯೋತ್ಪಾದನೆ ವಿಷಯದಲ್ಲಿ ದ್ವಂದ್ವ ನಿಲುವುಗಳನ್ನು ಭಾರತ ಒಪ್ಪುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟಪಡಿಸಿದ್ದಾರೆ. ಚೀನಾದ ಟಿಯಾಂಜಿನ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆ-ಎಸ್‌ಸಿಒ ಶೃಂಗಸಭೆಯ ಅಧಿವೇಶನವನ್ನುದ್ದೇಶಿಸಿ ಇಂದು ಭಾಷಣ ಮಾಡಿದ ಅವರು, ಭಯೋತ್ಪಾದನೆ ಮನುಕುಲಕ್ಕೆ ಅತಿದೊಡ್ಡ ಸವಾಲಾಗಿದೆ. ಆದ್ದರಿಂದ ಎಲ್ಲ ರೀತಿಯ ಭಯೋತ್ಪಾದನೆಯನ್ನು ಖಂಡಿಸಬೇಕು ಎಂದು ಕರೆ ನೀಡಿದರು.ಭಾರತ ಕಳೆದ ೪ ದಶಕಗಳಿಂದ ಭಯೋತ್ಪಾದನೆಯನ್ನು ಎದುರಿಸುತ್ತಿದೆ ಎಂದ ಅವರು, ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ಬೆಂಬಲ ಸೂಚಿಸಿದ ರಾಷ್ಟ್ರಗಳಿಗೆ ಧನ್ಯವಾದ ತಿಳಿಸಿದರು. ಎಸ್‌ಸಿಒದ ಸದಸ್ಯ ರಾಷ್ಟ್ರವಾಗಿ ಭಾರತ ಅತ್ಯಂತ ಸಕಾರಾತ್ಮಕವಾಗಿ

ಪಾತ್ರ ವಹಿಸಿದೆ. ಭದ್ರತೆ, ಸಂಪರ್ಕ ಮತ್ತು ಅವಕಾಶ ಎಂಬ ಮೂರು ಅಂಶಗಳು ಎಸ್‌ಸಿಒ ಕುರಿತ ಭಾರತದ ದೃಷ್ಟಿಕೋನ ಮತ್ತು ನೀತಿಗಳ ಆಧಾರಸ್ತಂಭವಾಗಿದೆ ಎಂದು ನುಡಿದರು. ಶೃಂಗಸಭೆಯ ವೇಳೆ ಪ್ರಧಾನಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡರು. ಅಧಿವೇಶನದ ನಂತರ, ಪ್ರಧಾನಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ವೇಳೆ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಾರತ ಹಾಗೂ ರಷ್ಯಾ ಕಷ್ಟದ ಕಾಲದಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಿಂತಿವೆ. ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗಾಗಿ ಉಭಯ ರಾಷ್ಟ್ರಗಳ ನಡುವೆ ನಿಕಟ ಸಹಕಾರ ಪ್ರಮುಖವಾಗಿದೆ ಎಂದಿದ್ದಾರೆ. ಉಭಯ ರಾಷ್ಟ್ರಗಳು ಉಕ್ರೇನ್ ಸಂಘರ್ಷದ ಕುರಿತು ಮಾತುಕತೆಗಳನ್ನು ಮುಂದುವರೆಸಿವೆ ಎಂದಿರುವ ಪ್ರಧಾನಿ ಶಾಂತಿ ಸ್ಥಾಪನೆಗಾಗಿ ಇತ್ತೀಚಿನ ಪ್ರಯತ್ನಗಳನ್ನು ಸ್ವಾಗತಿಸಿದ್ದಾರೆ.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೯ ಸೆಕೆಂಡ್‌ಗಳು)

ನಿನ್ನೆ ಪ್ರಧಾನಿ, ಚೀನಾ ಅಧ್ಯಕ್ಷ ಕ್ಷಿ ಜಿನ್‌ಪಿಂಗ್ ಅವರೊಂದಿಗೆ ಚರ್ಚೆ ನಡೆಸಿದ್ದು, ಭಾರತ-ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಪುನರ್‌ನಿರ್ಮಿಸುವತ್ತ ಗಮನ ಕೇಂದ್ರೀಕರಿಸಿದ್ದರು. ಈ ಕುರಿತು ವಿವರಿಸಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಪ್ರಧಾನಿ ನರೇಂದ್ರ ಮೋದಿ ಅವರು, ದ್ವಿಪಕ್ಷೀಯ ಸಂಬಂಧಗಳ ಬಲವರ್ಧನೆಗೆ ಗಡಿಭಾಗಗಳಲ್ಲಿ ಶಾಂತಿ ಮತ್ತು ನೆಮ್ಮದಿಯ ಸ್ಥಿತಿ ಅವಶ್ಯಕವೆಂದು ತಿಳಿಸಿದ್ದಾರೆ. ಗಡಿಭಾಗಗಳಲ್ಲಿ ಶಾಂತಿ ಸ್ಥಾಪನೆ ಕುರಿತು ಉಭಯ ರಾಷ್ಟ್ರಗಳ ನಾಯಕರಲ್ಲಿ ಒಮ್ಮತ ಮೂಡಿದೆ ಎಂದು ಹೇಳಿದರು.

*******

ಟಿಯಾಂಜಿನ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆ - ಎಸ್‌ಸಿಒ ಶೃಂಗಸಭೆಯ ಬಳಿಕ ಟಿಯಾಂಜಿನ್ ಘೋಷಣಾ ಪತ್ರವನ್ನು ಬಿಡುಗಡೆಗೊಳಿಸಲಾಗಿದ್ದು, ಇದರಲ್ಲಿ ಭಯೋತ್ಪಾದನೆ ವಿರುದ್ಧ ಸ್ಪಷ್ಟ ಮತ್ತು ಒಮ್ಮತದ ಸಂದೇಶ ನೀಡಲಾಗಿದೆ. ಇದರ ಜೊತೆಗೆ ಪ್ರಾದೇಶಿಕ ಸಹಕಾರ ಮತ್ತು ನಾವೀನ್ಯತೆ ಕ್ಷೇತ್ರದಲ್ಲಿ ಭಾರತದ ಬೆಳೆಯುತ್ತಿರುವ ಪಾತ್ರವನ್ನು ಗುರುತಿಸಲಾಗಿದೆ. ಸದಸ್ಯ ರಾಷ್ಟ್ರಗಳು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದು, ಸಂತ್ರಸ್ತ

ಕುಟುಂಬಗಳಿಗೆ ಸಂತಾಪ ಸೂಚಿಸಿವೆ. ಕಾರಣಕರ್ತ ಅಪರಾಧಿಗಳು, ಆಯೋಜಕರು ಮತ್ತು ಪ್ರಾಯೋಜಕರನ್ನು ಶಿಕ್ಷೆಗೆ ಒಳಪಡಿಸುವುದನ್ನು ಘೋಷಣೆ ಒತ್ತಿ ಹೇಳಿದೆ. ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಉಗ್ರವಾದವನ್ನು ಎದುರಿಸಲು ಎಸ್‌ಸಿಒ ರಾಷ್ಟ್ರಗಳು ಬದ್ಧವಿರುವುದಾಗಿ ಪುನರ್ ದೃಢಪಡಿಸಿದ್ದು, ಸೇನಾ ಅಥವಾ ಇತರ ಉದ್ದೇಶಗಳಿಗಾಗಿ ಈ ಗುಂಪುಗಳನ್ನು ಬಳಸಿಕೊಳ್ಳುವುದನ್ನು ತಿರಸ್ಕರಿಸಿವೆ. ಹಲವು ಜಾಗತಿಕ ವೇದಿಕೆಗಳಲ್ಲಿ ಪ್ರತಿಧ್ವನಿಸಿರುವ ಭಾರತದ 'ಒಂದು ಭೂಮಿ, ಒಂದು ಕಟುಂಬ, ಒಂದು ಭವಿಷ್ಯ' ಎಂಬ ದೃಷ್ಟಿಕೋನವನ್ನು ಈ ಬಾರಿಯ ಟಿಯಾಂಜಿನ್ ಘೋಷಣಾ ಪತ್ರ ಪುನರುಚ್ಚರಿಸಿದೆ. ನಾವೀನ್ಯತೆ ಮತ್ತು ಪ್ರಾದೇಶಿಕ ತೊಡಗಿಸಿಕೊಳ್ಳುವಿಕೆಯಲ್ಲಿ ಭಾರತದ ಮುಂದಾಳತ್ವವನ್ನು ಸ್ವಾಗತಿಸಿರುವ ಈ ಘೋಷಣೆ, ಏಪ್ರಿಲ್ ೩ ರಿಂದ ೫ರವರೆಗೆ ನವದೆಹಲಿಯಲ್ಲಿ ನಡೆದ ೫ನೇ ಎಸ್‌ಸಿಒ ನವೋದ್ಯಮ ಮೇಳ, ಮೇ ತಿಂಗಳಲ್ಲಿ ನಡೆದ ೨೦ನೇ ಎಸ್‌ಸಿಒ ಥಿಂಕ್ ಟ್ಯಾಂಕ್ ವೇದಿಕೆಯ ಯಶಸ್ವಿ ಆಯೋಜಿಸಿದಕ್ಕಾಗಿ ಭಾರತವನ್ನು ಪ್ರಶಂಸಿಸಿದೆ. ಭಾರತೀಯ ವಿಶ್ವ ವ್ಯವಹಾರಗಳ ಸಮಿತಿಯಲ್ಲಿರುವ ಎಸ್‌ಸಿಒ ಅಧ್ಯಯನ ಕೇಂದ್ರದ ಸಾಂಸ್ಕೃತಿಕ ಮತ್ತು ಮಾನವೀಯ ವಿನಿಮಯಕ್ಕೆ ನೀಡುವ ಕೊಡುಗೆಗಾಗಿ ಘೋಷಣೆಯಲ್ಲಿ ಶ್ಲಾಘನೆ ವ್ಯಕ್ತಪಡಿಸಲಾಗಿದೆ. ಭಯೋತ್ಪಾದನೆ ವಿರುದ್ಧದ ಸಂಯುಕ್ತ ಹೋರಾಟವನ್ನು ಬಲಪಡಿಸುವಲ್ಲಿ ಟಿಯಾಂಜಿನ್ ಘೋಷಣೆ ಮಹತ್ವದ ಹೆಜ್ಜೆಯಾಗಿದ್ದು, ಎಸ್‌ಸಿಒದಲ್ಲಿ ಪ್ರಾದೇಶಿಕ ಸಹಕಾರ ರೂಪಿಸುವಲ್ಲಿ ಭಾರತದ ಪ್ರಭಾವಶಾಲಿ ಪಾತ್ರವನ್ನು ಒತ್ತಿ ಹೇಳುತ್ತದೆ.

*******

ಅಫ್ಘಾನಿಸ್ತಾನದ ಈಶಾನ್ಯ ಪ್ರಾಂತ್ಯದ ಕುನಾರ್‌ನಲ್ಲಿ ನಿನ್ನೆ ರಾತ್ರಿ ಸಂಭವಿಸಿದ ಭೂಕಂಪದಲ್ಲಿ ಸಾವನ್ನಪ್ಪಿದವರ ಸಂಖ್ಯೆ ೬೨೨ಕ್ಕೇರಿದೆ. ೧ ಸಾವಿರಕ್ಕೂ ಅಧಿಕ ಮಂದಿ ಗಾಯಗೊಂಡಿರುವ ಕುರಿತು ಅಫ್ಘಾನಿಸ್ತಾನ್ ಸರ್ಕಾರಿ ಸುದ್ದಿಸಂಸ್ಥೆ ವರದಿ ಮಾಡಿದೆ. ಅತಿ ಕಡಿಮೆ ಸಂಪರ್ಕ ಸಾಧ್ಯವಾಗುವ ದೂರದ ಪ್ರದೇಶಗಳಲ್ಲಿ ರಕ್ಷಣಾ ತಂಡಗಳು ಶೋಧ ಕಾರ್ಯ ನಡೆಸಿದ್ದು, ಹಾನಿಯ ಸ್ಪಷ್ಟ ಪ್ರಮಾಣ ಪರಿಶೀಲಿಸುತ್ತಿವೆ. ಈ ಸಂಖ್ಯೆಗಳು ಆರಂಭಿಕ ಅಂಕಿಅಂಶಗಳಾಗಿದ್ದು, ಜನರ ರಕ್ಷಣೆಗೆ ಪ್ರಯತ್ನಗಳು ಮುಂದುವರೆದಿವೆ ಎಂದು ವರದಿ ತಿಳಿಸಿದೆ. ನಿನ್ನೆ ರಾತ್ರಿ ಅಫ್ಘಾನಿಸ್ತಾನದ ಪೂರ್ವ ಭಾಗದಲ್ಲಿ ರಿಕ್ಟರ್ ಮಾಪಕದಲ್ಲಿ ಸುಮಾರು ೬ರಷ್ಟು ತೀವ್ರತೆಯ ಭೂಕಂಪ ದಾಖಲಾಗಿದೆ.

ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆ-ಯುಎಸ್‌ಜಿಎಸ್ ಪ್ರಕಾರ, ಜಲಾಲಾಬಾದ್‌ನಿಂದ ಈಶಾನ್ಯಕ್ಕೆ ೨೭ ಕಿಲೋಮೀಟರ್ ದೂರದಲ್ಲಿ, ೮ ಕಿಲೋಮೀಟರ್ ಆಳದಲ್ಲಿ ಭೂಕಂಪ ಸಂಭವಿಸಿದೆ. ಸುಮಾರು ೨೦ ನಿಮಿಷಗಳ ನಂತರ, ನಂಗರ್‌ಹಾರ್ ಪ್ರಾಂತ್ಯವು ಮತ್ತೊಂದು ಕಂಪನವನ್ನು ಅನುಭವಿಸಿತು, ೧೦ ಕಿಲೋಮೀಟರ್ ಆಳದಲ್ಲಿ ೪.೫ರಷ್ಟು ತೀವ್ರತೆಯನ್ನು ದಾಖಲಿಸಿತು. ದೂರದ ಪರ್ವತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಗಳಿಗೆ ನೆರವು ನೀಡುವಂತೆ ತಾಲಿಬಾನ್ ಸರ್ಕಾರಿ ಅಧಿಕಾರಿಗಳು ಮನವಿ ಮಾಡಿದ್ದಾರೆ. ದೆಹಲಿ ಹಾಗೂ ರಾಷ್ಟ್ರ ರಾಜಧಾನಿ ಪ್ರದೇಶ ಸೇರಿದಂತೆ ಪಾಕಿಸ್ತಾನ ಮತ್ತು ಉತ್ತರ ಭಾರತದಾದ್ಯಂತ ಭೂಕಂಪದ ಅನುಭವವಾಗಿದೆ.

*******

ನವದೆಹಲಿಯಲ್ಲಿ ಇಂದು ಇಂಡಿಯಾ ಮೊಬೈಲ್ ಕಾಂಗ್ರೆಸ್ - ಐಎಂಸಿ ೨೫ ಆಪ್ ಅನ್ನು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅಧಿಕೃತವಾಗಿ ಬಿಡುಗಡೆಗೊಳಿಸಿದರು.ಕೃತಕಬುದ್ಧಿಮತ್ತೆ ಆಧಾರಿತ ಶಿಫಾರಸ್ಸುಗಳು, ಸುಧಾರಿತ ನೆಟ್‌ವರ್ಕಿಂಗ್ ಮತ್ತು ಸಂವಹನಾತ್ಮಕ ವೈಶಿಷ್ಟ್ಯಗಳನ್ನು ಹೊಂದಿರುವ ಈ ಆಪ್ ಬಳಕೆದಾರರ ಅನುಭವವನ್ನು ಉತ್ತಮಗೊಳಿಸುವ ಉದ್ದೇಶ ಹೊಂದಿದೆ. ಈ ಆಪ್ ಮೂಲಕ ಬಳಕೆದಾರರು ವಸ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಸಂಪರ್ಕ ಸಾಧಿಸಲು ಮತ್ತು ಅನ್ವೇಷಿಸಲು ನೆರವಾಗಲಿದೆ. ಇಂಡಿಯಾ ಮೊಬೈಲ್ ಕಾಂಗ್ರೆಸ್‌ನ ೯ನೇ ಆವೃತ್ತಿ ಮುಂದಿನ ತಿಂಗಳ ೮ ರಿಂದ ೧೧ರವರೆಗೆ ನವದೆಹಲಿಯ ಯಶೋಭೂಮಿ ಸಮುದಾಯ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಪರಿವರ್ತನೆಗಾಗಿ ನಾವೀನ್ಯತೆ ಎಂಬುದು ಈ ಬಾರಿಯ ವಸ್ತುಪ್ರದರ್ಶನದ ಧ್ಯೇಯವಾಕ್ಯವಾಗಿದೆ. ಐಎಂಸಿ ಪ್ರದರ್ಶನದಲ್ಲಿ ಒಂದು ಸಾವಿರಕ್ಕೂ ಅಧಿಕ ನವೀನ ತಂತ್ರಜ್ಞಾನ ಅನುಷ್ಠಾನಗಳನ್ನು ಪ್ರದರ್ಶನಗೊಳ್ಳಲಿದ್ದು, ೫ ಜಿ, ೬ ಜಿ, ಎಐ ಇಂಟರ್‌ನೆಟ್ ಆಫ್ ಥಿಂಕ್ಸ್, ವಿದ್ಯುನ್ಮಾನ ಉಪಕರಣ ತಯಾರಿಕೆ, ಹಸಿರು ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ನವೀನ ಸಾಧ್ಯತೆಗಳು ಮತ್ತು ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು.

*******

೧೪ನೇ ನಾಗಾಲ್ಯಾಂಡ್ ವಿಧಾನಸಭೆಯ ಏಳನೇ ಅಧಿವೇಶನ ನಾಳೆ ಆರಂಭವಾಗಲಿದ್ದು, ಎರಡು ದಿನಗಳ ಕಾಲ ನಡೆಯಲಿದೆ. ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ, ಅಧಿವೇಶನ, ಇತ್ತೀಚೆಗೆ ನಿಧನರಾದ ಸದಸ್ಯರಿಗೆ ಸಂತಾಪ ಸೂಚನೆಯೊಂದಿಗೆ ಪ್ರಾರಂಭವಾಗುತ್ತದೆ. ನಂತರ ಪ್ರಶ್ನೋತ್ತರ ಕಲಾಪ ನಡೆಯಲಿದೆ. ದಿನದ ಕಾರ್ಯಸೂಚಿಯಲ್ಲಿ ಮಸೂದೆಗಳ ಅನುಮೋದನೆಯ ವರದಿ, ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳ ಕುರಿತು ಚರ್ಚೆಗಳು ಮತ್ತು ಸರ್ಕಾರಿ ಮಸೂದೆಗಳು ಹಾಗೂ ನಿರ್ಣಯಗಳ ಮಂಡನೆ ಸೇರಿವೆ.

*******

ಯುಎಸ್ ಓಪನ್ ಟೆನಿಸ್‌ನ ಪುರುಷರ ಸಿಂಗಲ್ಸ್ ಪೂರ್ವ-ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನೊವಾಕ್ ಜೊಕೊವಿಚ್, ಜರ್ಮನಿಯ ಜಾನ್-ಲೆನ್ನಾರ್ಡ್ ಸ್ಟ್ರಫ್ ಅವರನ್ನು ೬-೩, ೬-೩, ೬-೨ ಸೆಟ್‌ಗಳಿಂದ ಸೋಲಿಸಿ ತಮ್ಮ ದಾಖಲೆಯ ೬೪ನೇ ಗ್ರ್ಯಾಂಡ್ ಸ್ಲ್ಯಾಮ್ ಕ್ವಾರ್ಟರ್ ಫೈನಲ್ ತಲುಪಿದ್ದಾರೆ. ನೊವಾಕ್ ಜೊಕೊವಿಚ್, ಒಂದು ವರ್ಷದಲ್ಲಿ ಎಲ್ಲಾ ಪ್ರಮುಖ ಪಂದ್ಯಾವಳಿಗಳಲ್ಲಿ ಕನಿಷ್ಠ ಕ್ವಾರ್ಟರ್ ಫೈನಲ್ ತಲುಪಿದ ಸಾಧನೆಯನ್ನು ತಮ್ಮ ವೃತ್ತಿ ಜೀವನದಲ್ಲಿ ಒಂಬತ್ತನೆ ಬಾರಿ ಮಾಡುವ ಮೂಲಕ ರೊಜರ್ ಫೆಡರರ್ ಅವರ ದಾಖಲೆಯನ್ನು ಹಿಂದಿಕ್ಕಿದ್ದಾರೆ. ಮತ್ತೊಂದು ಸಿಂಗಲ್ಸ್ ಪಂದ್ಯದಲ್ಲಿ, ವಿಶ್ವದ ನಂ. ೨ ಮತ್ತು ಮಾಜಿ ಚಾಂಪಿಯನ್ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಫ್ರೆಂಚ್‌ನ ಆರ್ಥರ್ ರಿಂಡರ್‌ನೆಕ್ ಅವರನ್ನು ೭-೬, ೬-೩, ೬-೪ ಸೆಟ್‌ಗಳಿಂದ ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ, ಹಾಲಿ ಚಾಂಪಿಯನ್ ಬೆಲಾರಸ್‌ನ ಅರಿನಾ ಸಬಲೆಂಕಾ ಸ್ಪೇನ್‌ನ ಕ್ರಿಸ್ಟೀನಾ ಬುಕ್ಸಾ ಅವರನ್ನು ೬-೧, ೬-೪ ಸೆಟ್‌ಗಳಿಂದ ಮಣಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಮತ್ತೊಂದು ಪಂದ್ಯದಲ್ಲಿ, ೨೦೨೪ ರ ಯುಎಸ್ ಓಪನ್ ರನ್ನರ್ ಅಪ್ ಆಗಿರುವ ವಿಶ್ವದ ನಂ. ೪ ನೇ ಶ್ರೇಯಾಂಕಿತೆ ಜೆಸ್ಸಿಕಾ ಪೆಗುಲಾ, ಸತತ ಎರಡನೇ ವರ್ಷ ಕ್ವಾರ್ಟರ್ ಫೈನಲ್‌ಗೆ ತಲುಪಿದ್ದಾರೆ. ಇದಕ್ಕೂ ಮೊದಲು, ಪುರುಷರ ಡಬಲ್ಸ್‌ನಲ್ಲಿ, ಭಾರತದ ಯೂಕಿ ಭಾಂಬ್ರಿ ಮತ್ತು ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಜೋಡಿಯು ಅಮೆರಿಕದ ಜೋಡಿ ಮಾರ್ಕೋಸ್ ಗಿರೋನ್ ಮತ್ತು ಲರ್ನರ್ ಟಿಯೆನ್ ವಿರುದ್ಧ ನೇರ ಸೆಟ್‌ಗಳ ಜಯ ಸಾಧಿಸಿದರು. ಇಂದು ಅವರು ತಮ್ಮ ೨ನೇ ಸುತ್ತಿನ ಪಂದ್ಯದಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಭಾರತೀಯ ಅನಿರುದ್ಧ್ ಚಂದ್ರಶೇಖರ್ ಮತ್ತು ವಿಜಯ್ ಪ್ರಶಾಂತ್

ಜೋಡಿ ಎಂಟನೇ ಶ್ರೇಯಾಂಕಿತ ಅಮೇರಿಕದ ಕ್ರಿಶ್ಚಿಯನ್ ಹ್ಯಾರಿಸನ್ ಮತ್ತು ಇವಾನ್ ಕಿಂಗ್ ಜೋಡಿಯನ್ನು ೨-೧ ಅಂತರದಿಂದ ಸೋಲಿಸಿದೆ.

****END***